5

# ಯೇಸು ಏಕೆ ನಮ್ಮಹಾಗೆ ಆದನು

# (2:5-18)

ಇಬ್ರಿಯ 2:5-18ರಲ್ಲಿ, ಯೇಸು ನಮ್ಮ ಹಾಗೆ ಮಾನವನಾದನು ಎಂದು ಬರೆಯಲ್ಪಟ್ಟಿದೆ. ವಚನ 6 ಮತ್ತು 7ರಲ್ಲಿ ಬರಹಗಾರನು ಕೀರ್ತನೆ 8ರ ಉಲ್ಲೇಖವನ್ನು ಮಾಡಿ, "ಅವನನ್ನು ದೇವದೂತರಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಿದಿಯಲ್ಲಾ; ಎಂದಿರುವನು." ವಚನ 9ರಲ್ಲಿ, ದೂತರಿಗಿಂತ ಅವನನ್ನು ಸ್ವಲ್ಪವೇ ಕಡಿಮೆ ಮಾಡಿದೆಯಲ್ಲಾ ಅಂದರೆ ಯೇಸು ಮನುಷ್ಯನಾದನು ಎಂಬದೇ ಈ ವಾಕ್ಯಭಾಗದಲ್ಲಿ ಈ ಸಂಗತಿಯನ್ನು ಪ್ರಮುಖಮಾಡಲಾಗಿದೆ:

- ಯೇಸು ಮನುಷ್ಯರನ್ನು, "ಸಹೋದರರು" ಎಂದಿರುವನು (ವಚನಗಳು 11, 12).
- ಯೇಸು "ರಕ್ತಮಾಂಸದಾರಿಯಾದನು" (ವಚನ 14).
- "ತನ್ನ ಸಹೋದರರಿಗೆ *ಸಮಾನನಾದನು*" (ವಚನ 17; ಒತ್ತಿ ಹೇಳಿದ್ದು ನನ್ನದು).

ಈ ಹೇಳಿಕೆಯಲ್ಲಿರುವ ಸಮಸ್ಯೆಯೇನೆಂದರೆ.[1] 1:4-14ರಲ್ಲಿ, ಯೇಸು ದೂತರಿಗಿಂತ ಶ್ರೇಷ್ಟನು ಎಂದಿರುವನು. 2:5ರಲ್ಲಿ, ಪುನಃ ಈ ವಿಚಾರವನ್ನು ಒತ್ತಿ ಹೇಳಲಾಗಿದೆ. ಯೇಸು ಮಾಂಸದಾರಿಯಾದದ್ದು ಸತ್ಯವಾಗಿದೆ. ಆತನು ಮನುಷ್ಯನಾದನು - ಅಂದರೆ "ದೂತರಿಗಿಂತ ಸ್ವಲ್ಪವೇ ಕಡಿಮೆಯಾದನು. ಹೀಗಿರುವಾಗ ಯೇಸು ದೂತರಿಗಿಂತ ಕಡಿಮೆ ಹಾಗೂ ಶ್ರೇಷ್ಟ ನಾಗುವದು ಹೇಗೆ?" ಯೇಸು ಮನುಷ್ಯನಾಗಿ ಬಂದದ್ದರಿಂದ ಆತನು ದೂತರಿಗಿಂತ ಶ್ರೇಷ್ಟನು ಎಂಬದನ್ನು ಅಲಕ್ಷ್ಯ ಮಾಡಿರುವದಿಲ್ಲ. ಯೇಸು ನಮ್ಮ ಹಾಗೆ ಆದನು ಎಂಬುದಕ್ಕೆ ಮೂರು ಕಾರಣಗಳನ್ನು ನೀಡಿರುವನು.

## ಮಾನವರಿಗಾಗಿ, ದೇವರ ಉದ್ದೇಶವನ್ನು ಈಡೇರಿಸಿದನು (2:5-8)

ಮನುಷ್ಯನು ಉತ್ತಮನಾಗಿ ಜೀವ ಮಾಲೆ ಹೊಂದಬೇಕೆಂಬ ಕಾರಣವು ಇದ್ದರೂ (ವಚನಗಳು 6, 7, 8ಎ, ಬಿ). ಪ್ರಥಮ ಮಾನವನು ಲೋಕಕ್ಕೆ ಪಾಪವನ್ನು ತಂದನು. ಅದರ ಪರಿಣಾಮವಾಗಿ, ಎಲ್ಲವುಗಳ ಮೇಲೆ ಮನುಷ್ಯನು ಹತೋಟಿ ಕಳಕೊಂಡನು (ವಚನ 9ಎ). NEB ಯಲ್ಲಿ, "ಎಲ್ಲವೂ ಮನುಷ್ಯನಿಗೆ ಅಧೀನವಾಗಿರುವದಿಲ್ಲ" ಎಂದಿದೆ. ಯೇಸು ತಾತ್ಕಾಲಿಕವಾಗಿ ನಮ್ಮ ಹಾಗೆ ಆಗುವವರೆಗೂ, ಮನುಷ್ಯನ ಉದ್ದೇಶವನ್ನು ಅರಿಯಲಾಗಲಿಲ್ಲ (2:17). ಆದರೂ ದೇವದೂತರಿಗಿಂತ ಸ್ವಲ್ಪ ಕಡಿಮೆಯಾಗಿ ಮಾಡಲ್ಪಟ್ಟ ಒಬ್ಬಾತನು, ಅಂದರೆ "ಯೇಸು" (ವಚನ 9ಎ). ಆತನು ಮಾನ ಪ್ರಭಾವಗಳನ್ನು ಹೊಂದಿದವನಾಗಿ, ದೇವರ ಸಕಲ ಉದ್ದೇಶಗಳನ್ನು ಈಡೇರಿಸಿದನು (ವಚನ 9ಬಿ).

*ಆತನು ಯೇಸು,* "ಬಹುಮಂದಿ ಪುತ್ರರನ್ನು" ಪ್ರಭಾವಕ್ಕೆ ಸೇರಿಸಿದನು (ವಚನ 10). ಅದರ ಪರಿಣಾಮವಾಗಿ ಆತನು ನಮ್ಮ ಹಾಗೆ ಆಗಿದ್ದರಿಂದ, ಅಂತಿಮವಾಗಿ ಮಾನವನು ದೇವರ ಯೋಜನೆಯನ್ನು ಅರಿಯಲು ಸಾಧ್ಯವಾಯಿತು.

## ಆತನು ನಮಗಾಗಿ ಮರಣಪಟ್ಟನು (2:9-16)

ಯೇಸುವಿನ ಮರಣವು ಅಗತ್ಯವಾಗಿತ್ತು. ವಚನ 9ರಲ್ಲಿ, "ಆತನು ಬಾಧೆಪಟ್ಟು

ಸತ್ತನು,"[2] ಹಾಗೂ ಆತನು ಆತ್ಮನಾಗಿ ಮರಣ ಹೊಂದುವದು ಅಸಾಧ್ಯವಾಗಿತ್ತು. ರಕ್ತ ಮಾಂಸದಾರಿಯಾಗುವದರಿಂದ ಮಾತ್ರ ಆತನು ಮರಣಹೊಂದಲು ಸಾಧ್ಯವಿತ್ತು. ಆತನು ನಮ್ಮ ಹಾಗೆ ಆಗಿದ್ದರಿಂದ (ವಚನ 9) ಕೃಪೆಯಿಂದಲೇ ಎಲ್ಲರಿಗೋಸ್ಕರ ಮರಣವನ್ನು ಅನುಭವಿಸಿದನು.

ತರುವಾಯ, ಯೇಸು ಮರಣವನ್ನು ಹೊಂದಿ, ಎದ್ದು ಬಂದದ್ದರಿಂದ, ಮಾನವನ ಮೇಲಿದ್ದ ಸೈತಾನನ ಭಲವನ್ನು ಕೆಡವಿ ಹಾಕಿದನು. ಈ ಕಾರಣದಿಂದಲೂ ಯೇಸು ಮಾಂಸದಾರಿಯಾಗಬೇಕಾಯಿತು:

> ಇದಲ್ಲದೆ ಮಕ್ಕಳು ರಕ್ತ ಮಾಂಸಧಾರಿಗಳಾಗಿರುವದರಿಂದ ಆತನೂ ಅವರಂತೆಯೇ ಆದನು. ತನ್ನ ಮರಣದಿಂದಲೇ ಮರಣಾಧಿಕಾರಿಯನ್ನು ಅಂದರೆ ಸೈತಾನನನ್ನು ಅಡಗಿಸಿಬಿಡುವದಕ್ಕೂ, ಮರಣಭಯದ ದೆಸೆಯಿಂದ ತಮ್ಮ ಜೀವಮಾನದಲ್ಲೆಲ್ಲಾ ದಾಸತ್ವದೊಳಗಿದ್ದವರನ್ನು ಬಿಡಿಸುವದಕ್ಕೂ ಅವರಂತೆ ರಕ್ತಮಾಂಸಧಾರಿಯಾದನು (ವಚನ 14).

ನಮ್ಮ ಪಾಠದಲ್ಲಿ ಯೇಸುವಿನ ಪುನರುತ್ಥಾನದ ಬಗ್ಗೆ ನಿಖರವಾಗಿ ಏನನ್ನೂ ಹೇಳಿರುವದಿಲ್ಲ, ಆದರೆ ಅದರ ಸೂಚನೆಗಳನ್ನು ನೀಡಿರುವೆವು.[3] ಯೇಸು ನಮ್ಮ ಹಾಗೆಯೇ ಆಗಿ. ಮರಣದಿಂದ ಎದ್ದು ಬಂದಿರುವ ಕಾರಣದಿಂದ "ದಾಸತ್ವದೊಳಗಿದ್ದ ನಮ್ಮನ್ನು ಬಿಡಿಸಿದನು" (ವಚನ 15).

## ಆತನು ನಮಗಾಗಿ ಭಿನ್ನಹ ಮಾಡುತ್ತಾನೆ (2:17, 18)

ಇಬ್ರಿಯ ಪತ್ರಿಕೆಯ ಮುಖ್ಯ ಪ್ರಸ್ತಾಪವನ್ನು ಈ ವಾಕ್ಯ ಭಾಗದಲ್ಲಿ ನೀಡಲಾಗಿದೆ: ಯೇಸು ನಮ್ಮ ಮಹಾಯಜಕನಾಗಿದ್ದಾನೆ.[4] ನಮ್ಮ ಪರವಾಗಿ ದೇವರಲ್ಲಿ ಭಿನ್ನಹ ಮಾಡುವ ಕಾರಣದಿಂದ, ಯೇಸು ಮಹಾಯಾಜಕನಾದನು.

> ಆದದರಿಂದ ಆತನು ಎಲ್ಲಾ ವಿಷಯಗಳಲ್ಲಿ ತನ್ನ ಸಹೋದರರಿಗೆ ಸಮಾನನಾಗ ಬೇಕಾಗಿ ಬಂತು. ಹೀಗೆ ಆತನು ಜನರ ಪಾಪಗಳನ್ನು ನಿವಾರಣ ಮಾಡುವದಕ್ಕಾಗಿ ದೇವರ ಕಾರ್ಯಗಳಲ್ಲಿ ಕರುಣೆಯೂ ನಂಬಿಕೆಯೂ ಉಳ್ಳ ಮಹಾಯಾಜಕನಾದನು. ತಾನೇ ಶೋಧಿಸಲ್ಪಟ್ಟು ಬಾಧೆಯನ್ನು ಅನುಭವಿಸಿರುವದರಿಂದ ಶೋಧಿಸಲ್ಪಡುವವರಿಗೆ ಸಹಾಯಮಾಡುವದಕ್ಕೆ ಶಕ್ತನಾಗಿದ್ದಾನೆ (ವಚನಗಳು 17, 18).

ಪ್ರಾಯಶ್ಚಿತದ ದಿನದ ವರ್ಷದಲ್ಲಿ, ಲೋಕಕ್ಕೆ ಸಂಬಂಧಪಟ್ಟ ಯಾಜಕನು ಯಜ್ಞವನ್ನು ಅರ್ಪಿಸುತ್ತಿದ್ದನು. "ಅದನ್ನು ಜನರ ಪಾಪದ ನಿವಾರಣೆಗಾಗಿ ಮಾಡುತ್ತಿದ್ದನು" - ಇದರಿಂದ ದೇವರ ಕೋಪವನ್ನು ಶಮನ ಮಾಡುತ್ತಿದ್ದನು. ಯೇಸು ನಮ್ಮ ಮಹಾಯಾಜಕನಾಗಿ ನಮ್ಮ ಪಾಪದ ನಿಮಿತ್ತ ತನ್ನನ್ನೇ ಸಮರ್ಪಿಸಿದನು. ಹೇಗೂ, ಆತನು ಅದಕ್ಕಿಂತಲೂ ಹೆಚ್ಚಿನದನ್ನೇ ಮಾಡಿರುವನು. ಆತನು ಮಹಾಯಾಜಕನಾಗಿರುವದಿಂದ "ಶೋಧಿತರಾದವರಿಗಾಗಿ ಸಹಾಯ ಮಾಡುತ್ತಾನೆ" ಅಧ್ಯಾಯ 4ರಲ್ಲಿ ಆತನು ನಮ್ಮ ಪರವಾಗಿ ಭಿನ್ನವಿಸುತ್ತಾನೆ ಎಂದು ಹೇಳ ಲಾಗಿದೆ (ವಚನಗಳು 14-16).

ಯೇಸು ಮನುಷ್ಯನ ಹಾಗೆ ಆಗಿದ್ದರಿಂದ, ಆತನು ದೂತರಿಗಿಂತಲೂ ಶ್ರೇಷ್ಟನು ಎಂಬ ಬಿರುದನ್ನು ಕಳಕೊಳ್ಳುವನೇ? ಇಲ್ಲ, ಎಂದು ನಮ್ಮ ಪಾಠ ಹೇಳುತ್ತದೆ ದೇವರ ಯೋಜನೆ ಹಾಗೂ ಉದ್ದೇಶಗಳನ್ನು ಈಡೇರಿಸುವ ನಿಮಿತ್ತ ಯೇಸು ಮನುಷ್ಯನಾಗ ಬೇಕಾಯಿತು. ಆತನು ನಮ್ಮ ಹಾಗೆ ಆದನು ಎಂಬ ಅಂಶದಲ್ಲಿ, ಆತನ ಮಹಿಮಾ ಪ್ರಭಾವತಿಶಯಗಳನ್ನು ಕಾಣುತ್ತೇವೆ.

ಟಿಪ್ಪಣಿಗಳು

[1]ವಚನ 6ರಲ್ಲಿ "ಆದರೆ ಎಂದು ಹೇಳಿ ವ್ಯತ್ಯಾಸತೋರಿಸಿದೆ." [2]ಬಾಧೆ ಪಡುವ ಮೆಸ್ಸೀಯನು ಎಂಬ ಅಂಶವು ಯೆಹೂದ್ಯರಿಗೆ ಅಡ್ಡಿಯಾಗಿತ್ತು. [3]ಇಬ್ರಿಯ 6:2; 11:19, 35 ಪುನರುತ್ಥಾನದ ಕುರಿತು ಹೇಳಲಾಗಿದೆ. [4]ಈ ಮೊದಲೇ ಆತನ ಯಾಜಕತ್ವದ ಸೂಚನೆ ಇದ್ದರೂ (1:3), ಇಬ್ರಿಯದಲ್ಲಿ ಮೊದಲು ಬಾರಿ ಆತನನ್ನು ಮಹಾಯಜಕ ಎಂದು ಕರೆಯಲಾಗಿದೆ.